# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೦೮, ಜನವರಿ, ೨೦೨೬(ಪುಷ್ಯ, ೧೮, ಶಕವರ್ಷ, ೧೯೪೭)<br>BENGALURU, THURSDAY, 08, JANUARY, 2026(PUSHYA , 18, SHAKAVARSHA, 1947) | ನಂ. ೨೮<br>No. 28 |


**PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 68 SHASANA 2025, BENGALURU, DATED:08.01.2026**

The Karnataka Land Revenue (Second Amendment) Bill, 2025 ಇದಕ್ಕೆ 2026ರ ಜನವರಿ ತಿಂಗಳ 7ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2026ರ ಕರ್ನಾಟಕ ಅಧಿನಿಯಮ ಸಂಖ್ಯೆ: 14 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## KARNATAKA ACT NO. 14 OF 2026

**(First Published in the Karnataka Gazette Extra-ordinary on the 8th day of January, 2026)**

## THE KARNATAKA LAND REVENUE (SECOND AMENDMENT) ACT, 2025

(Received the assent of the Governor on the 7th day of January, 2026)

An Act further to amend the Karnataka Revenue Act, 1964.

Whereas it is expedient further to amend the Karnataka Land Revenue Act, 1964 (Karnataka Act 12 of 1964), for the purposes hereinafter appearing;

Be it enacted by the Karnataka State Legislature in the seventy sixth year of the Republic of India, as follows:-

**1. Short title and commencement.-**(1) This Act may be called the Karnataka Land Revenue (Second Amendment) Act, 2025.

(2) It shall come in to force on such date as the State Government may by notification in the Official Gazette, appoint.

**2. Amendment of section 127.-** In the Karnataka Land Revenue Act, 1964 (Karnataka Act 12 of 1964) in section 127, after sub-section (3), the following sub-section shall be inserted, namely:-

"(4) Notwithstanding anything contained in the preceding sub-sections, the Tahsildars of Kodagu District shall, on receipt of an application or otherwise, after following the procedure prescribed, and after conduct of enquiry as he deems fit, make necessary corrections or deletions in the land records pertaining to entries that were transferred from Column 3 of Jamabandi Register to Column 9 and 12 of RTC and consequential entries made due to such transfer thereof, to bring them in conformity with the provisions of clause (a) of sub-section (1) of this section:

Provided that any such order passed by the Tahsildar under this sub-section shall be appealable as per the procedure prescribed under this Act."

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 68 ಶಾಸನ 2025, ಬೆಂಗಳೂರು, ದಿನಾಂಕ:08.01.2026**

The Kannada Language Comprehensive Development Act, 2022 (Karnataka Act No. 13 of 2023)ರ ಪ್ರಕರಣ 6 ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Land Revenue (Second Amendment) Act, 2025 (Karnataka Act No. 14 of 2026) ರ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2026ರ ಕರ್ನಾಟಕ ಅಧಿನಿಯಮ ಸಂಖ್ಯೆ: 14**

(2026ರ ಜನವರಿ ತಿಂಗಳ 8ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2025**

(2026 ರ ಜನವರಿ ತಿಂಗಳ 7ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಭೂಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ.–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು, ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ**,** 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 127ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಭೂಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ 127ನೇ ಪ್ರಕರಣದ (3)ನೇ ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

''(4) ಹಿಂದಿನ ಉಪ-ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಕೊಡಗು ಜಿಲ್ಲೆಯ ತಹಶೀಲ್ದಾರರು ಅರ್ಜಿ ಅಥವಾ ಅನ್ಯಥಾ ಸ್ವೀಕರಿಸಿದ ಮೇಲೆ, ನಿಯಮಿಸಲಾದ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ, ಮತ್ತು ಅವರು ಸೂಕ್ತವೆಂದು ಭಾವಿಸಿದ ವಿಚಾರಣೆಯನ್ನು ನಡೆಸಿದ ತರುವಾಯ ಜಮಾಬಂದಿ ರಿಜಿಸ್ಟರಿನ ಕಾಲಂ 3 ರಿಂದ ಆರ್‌ಟಿಸಿಯ ಕಾಲಂ 9 ಮತ್ತು 12ರವರೆಗೆ ವರ್ಗಾಯಿತ ನಮೂದುಗಳಿಗೆ ಸಂಬಂಧಿಸಿದ ಹಾಗೂ ಅದರ ಅಂಥ ವರ್ಗಾವಣೆಯಿಂದಾಗಿ ಮಾಡಲಾದ ಆನುಷಂಗಿಕ ನಮೂದುಗಳನ್ನು, ಈ ಪ್ರಕರಣದ ಉಪ-ಪ್ರಕರಣ (1)ರ (ಎ) ಖಂಡದ ಉಪಬಂಧಗಳಿಗೆ ಅನುಸಾರವಾಗಿ ಅವುಗಳನ್ನು ತರಲು ಅಗತ್ಯವಾದ ಸರಿಪಡಿಸುವಿಕೆಗಳು ಅಥವಾ ರದ್ದತಿಗಳನ್ನು ಮಾಡತಕ್ಕದ್ದು :

ಪರಂತು ಈ ಉಪ-ಪ್ರಕರಣದಡಿ ತಹಶೀಲ್ದಾರನು ಮಾಡಿದ ಯಾವುದೇ ಅಂಥ ಆದೇಶವು ಈ ಅಧಿನಿಯಮದಡಿ ನಿಯಮಿಸಲಾದ ಕಾರ್ಯವಿಧಾನದ ಅನುಸಾರವಾಗಿ ಅಪೀಲಿಗೆ ಅರ್ಹವಾಗತಕ್ಕದ್ದು.''

The above translation of the Karnataka Land Revenue (Second Amendment) Act, 2025 (Karnataka Act No. 14 of 2026) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No. 13 of 2023).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH